# ಪುಂಗವ

ರಾಷ್ಟ್ರೀಯ ಜಾಗರಣ ಪತ್ರಿಕೆ






ಸಂಪುಟ : 38 ಸಂಚಿಕೆ : 6 ದುರ್ಮುಖಿ–ಕಾರ್ತಿಕ ಕಲಿಯುಗಾಬ್ದ 5118 1–11–2016 ತ್ರೈವಾರ್ಷಿಕ : ರೂ. 150.00 ಬಿಡಿ ಪ್ರತಿ : ರೂ. 3.00 ಪುಟಗಳು : 4


## ಆತ್ಮ ವಿಶ್ವಾಸದ ಹೊಸ ಹೆಜ್ಜೆಗಳು

• 92ಕ್ಕೆ ಕಾಲಿಟ್ಟ ಆರೆಸ್ಸೆಸ್ • ದೇಶದಾದ್ಯಂತ ನೂತನ ಗಣವೇಶ ಜಾರಿಗೆ • ಸರಸಂಘಚಾಲಕ ಮೋಹನ್ ಭಾಗವತ್ ಭಾಷಣ • ರಾಷ್ಟ್ರೀಯ ವಿಚಾರಗಳ ಕುರಿತು ಅಭಿಪ್ರಾಯ



### ಸಮಾಜ ವಿರೋಧಿಗಳೊಂದಿಗೆ ಗೋಸಂರಕ್ಷಕರ ತುಲನೆ ಸಲ್ಲದು

ಅನೇಕ ಸಜ್ಜನರು, ಜೈನ ಸಮಾಜ, ಸಂತರು, ಅನೇಕ ಸಂಸ್ಥೆಗಳು ಗೋವಂಶ ಸಂರಕ್ಷಣೆಯ ಕಾರ್ಯದಲ್ಲಿ ತೊಡಗಿವೆ. ಗೋರಕ್ಷಣೆ ಸಂವರ್ಧನೆ ಮತ್ತು ಗೋಹತ್ಯಾ ನಿಷೇಧವನ್ನು ಜಾರಿಗೆ ತರಬೇಕು ಎಂದು ಸಂವಿಧಾನದ ಮಾರ್ಗದರ್ಶಕ ತತ್ವದಲ್ಲಿಯೇ ಹೇಳಲಾಗಿದೆ. ಚಿಕ್ಕ ಹಿಡುವಳಿಯ ರೈತರ ಬೇಸಾಯ ಕಾರ್ಯಕ್ಕೆ ಗೋವಂಶವೇ ಆಧಾರವಾಗಿದೆ. ಭಾರತೀಯ ಗೋವಂಶದ ಗುಣಗಳು ವಿಜ್ಞಾನಸಮ್ಮತವಾಗಿವೆ. ಗೋವಂಶವು ನಮ್ಮ ಆರ್ಥಿಕತೆಯ ಆಧಾರವೂ ಹೌದು. ಪರಂಪರೆಗನುಸಾರವಾಗಿ ಗೋಮಾತೆಯ ಸ್ಥಾನವಿದೆ. ಇಂತಹ ಗೋಕುಲದ ಸಂರಕ್ಷಣಾ ಕಾರ್ಯದಲ್ಲಿ ನಿರತರಾಗಿರುವವರು ಸಜ್ಜನರು. ಕಾನೂನು ಸಂವಿಧಾನಗಳ ವ್ಯಾಪ್ತಿಯ ಒಳಗಡೆಯೇ ಅವರು ಕೆಲಸ ನಿರ್ವಹಿಸುತ್ತಾರೆ. ಆದರೆ ಸಮಾಜದಲ್ಲಿ ವೈಮನಸ್ಯ ಉಂಟುಮಾಡಬೇಕೆಂದು ಮತ್ತು ಕಾನೂನನ್ನು ಮುರಿಯುವ ಸ್ವಭಾವದ ಕಾರಣ ಈ ವಿಷಯವನ್ನಿಟ್ಟುಕೊಂಡು ಉಪದ್ರವ ಉಂಟುಮಾಡುವ ಜನರ ಜೊತೆಗೆ ನಿಜವಾದ ಗೋರಕ್ಷಣೆ ಮಾಡುವವರ ತುಲನೆ ಸಾಧ್ಯವಿಲ್ಲ, ಅವರನ್ನು ಬೇರೆ ಬೇರೆಯಾಗಿಟ್ಟು ನೋಡಬೇಕು.

### ದೇಶ ಮುನ್ನಡೆದಿದೆ

ನಮ್ಮ ದೇಶದ ಈಗಿನ ಆಡಳಿತ ಉದಾಸೀನದಿಂದ ಕುಳಿತಿರುವಂತಹದ್ದಲ್ಲ. ಅನೇಕ ಒಳ್ಳೆಯ ಯೋಜನೆಗಳು ನಡೆದಿವೆ, ಮಾಡಬೇಕಾದ ಕೆಲಸಗಳೂ ಅನೇಕ ಇವೆ, ಅಪೇಕ್ಷೆಗಳೂ ಬಹಳ ಇವೆ. ಹಾಗೆಯೇ ನಮ್ಮ ದೇಶ ಉತ್ತಮವಾಗಬಲ್ಲದು ಎನ್ನುವ ವಿಶ್ವಾಸ ಸಮಾಜದಲ್ಲಿ ಇಂದು ಮೂಡಿದೆ.

ಆದರೆ ವಿಶ್ವದ ಕೆಲವು ಶಕ್ತಿಗಳಿಗೆ ಭಾರತ ಪ್ರಭಾವಿಯಾಗುವುದು ಇಷ್ಟವಿಲ್ಲ. ಏಕೆಂದರೆ ಭಾರತದ ಪ್ರಭಾವ ಹೆಚ್ಚಾದರೆ ವಿಶ್ವ ಶಾಂತಿ ಸಮನ್ವಯದಿಂದ ಸಾಗುವುದು. ಕಟ್ಟರ್‌ವಾದಿ, ವಿಘಟನೆಗಳ ಆಧಾರದ ಮೇಲೆಯೇ ನಿಂತಿರುವ ಕೆಲವು ಶಕ್ತಿಗಳು ಭಾರತ ಮುನ್ನಡೆಯುವುದನ್ನು ಬಯಸುವುದಿಲ್ಲ. ಭಾರತದ ನೆಲದಲ್ಲಿಯೂ ತಮ್ಮ ಪ್ರಭಾವ ಬೆಳೆಸುವ ಪ್ರಯತ್ನವನ್ನು ಅವರು ಮಾಡುತ್ತಿದ್ದಾರೆ. ನಮ್ಮ ದೇಶದ ಕೆಲವು ಸ್ವಾರ್ಥಿಗಳಿಂದ ಅವರ ಪ್ರಯತ್ನಕ್ಕೆ ಪೋಷಣೆಯೂ ದೊರೆಯುತ್ತಿದೆ.

### ಸಂಪೂರ್ಣ ಜಮ್ಮು ಕಾಶ್ಮೀರ ಭಾರತಕ್ಕೆ ಸೇರಿದ್ದು

ಮೀರ್‌ಪುರ್, ಮುಜಫರಾಬಾದ್, ಗಿಲ್ಗಿಟ್ ಬಾಲ್ಟಿಸ್ತಾನ ಸೇರಿದಂತೆ ಇಡೀ ಕಾಶ್ಮೀರ ಭಾರತದ ಭಾಗವಾಗಿದೆ. ಸಂಸತ್ತಿನಲ್ಲಿಯೂ ಎರಡು ಬಾರಿ ಈ ಪ್ರಸ್ತಾಪ ಅಂಗೀಕಾರವಾಗಿದೆ, ಈಗಲೂ ಹೇಳಿಕೆಗಳು ಬರುತ್ತಿವೆ. ಮಾತಿನಲ್ಲಿರುವ ಈ ದೃಢತೆ ಕ್ರಿಯಾನ್ವಯದಲ್ಲಿಯೂ ಬರಬೇಕು. ಪ್ರಧಾನಮಂತ್ರಿಗಳು ಇತ್ತೀಚೆಗೆ ಹೇಳಿದಂತೆ ಜಮ್ಮು–ಕಾಶ್ಮೀರಕ್ಕೆ ವಿಜಯದ ಜೊತೆಗೆ ವಿಶ್ವಾಸವೂ ಅಗತ್ಯವಾಗಿದೆ. ಜಮ್ಮು–ಕಾಶ್ಮೀರದಲ್ಲಿ ಉಪದ್ರವ ಉಂಟುಮಾಡುವ ಶಕ್ತಿಗಳ ಕ್ಷೇತ್ರ ತುಂಬಾ ಚಿಕ್ಕದಾಗಿದೆ, ಉಪದ್ರವಗಳು ಕಡಿಮೆಯಾಗಿವೆ. ಇಡೀ ಜಮ್ಮು ಲಢಾಕ್ ಮತ್ತು ಕಾಶ್ಮೀರ ಕಣಿವೆಯ ದೊಡ್ಡ ಪ್ರದೇಶ ಇಂತಹ ಉಪದ್ರವಗಳಿಂದ ಬಹುತೇಕ ಮುಕ್ತವಾಗಿವೆ. ಅಲ್ಲಿನ ರಾಷ್ಟ್ರೀಯ ಶಕ್ತಿಗಳನ್ನು ಬಲಗೊಳಿಸುವ ಕೆಲಸ ಆಗಬೇಕು. ಉಪದ್ರವಕಾರಿಗಳೊಡನೆ ದೃಢವಾದ ವ್ಯವಹಾರ ನಡೆಯಬೇಕು, ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನೀತಿಯಲ್ಲಿ ಒಂದೇ ಧೋರಣೆ ಇರಬೇಕು.

### ಯುಗಯುಗಗಳಿಂದಲೂ ಭಾರತ ಒಂದು ರಾಷ್ಟ್ರ

ಭಾರತ ರಾಜ್ಯಗಳ ಒಕ್ಕೂಟ ಎಂದು ಸಂವಿಧಾನದಲ್ಲಿ ಹೇಳಲಾಗಿದೆ. ಆದರೆ ಯುಗಯುಗಗಳಿಂದಲೂ ನಾವು ಒಂದು ರಾಷ್ಟ್ರ ಒಂದು ಜನಾಂಗ ಎನ್ನುವುದನ್ನು ಮರೆಯಬಾರದು. ಒಂದು ವ್ಯವಸ್ಥೆಯ ಮುಖಾಂತರ ಹೀಗೆಯೇ ಬಾರತವನ್ನು ಒಂದು ದೇಶ ಒಂದು ಜನಾಂಗ ಒಂದು ರಾಷ್ಟ್ರವಾಗಿ ಐಕ್ಯವಾಗಿರಿಸುವುದು ಸಂವಿಧಾನದ ಉದ್ದೇಶವಾಗಿದೆ. ಆದ್ದರಿಂದ ತಮ್ಮ ತಮ್ಮ ರಾಜ್ಯದ ಹಿತಕ್ಕಾಗಿ ಅಥವಾ ಪಕ್ಷಗಳ ಹಿತಕ್ಕಾಗಿ ಏನೇನು ಮಾಡಲಾಗುತ್ತದೆ ಅವೆಲ್ಲವೂ ಸರಿ. ಆದರೆ ನಮ್ಮ ಮಾತು ಕೃತಿಗಳಿಂದ ನಮ್ಮ ದೇಶದ ಸನಾತನ ಏಕತೆಗೆ ಧಕ್ಕೆಯಾಗದೇ ಇರಲಿ.

### ಸಮಾಜ ಭೇದಮುಕ್ತ

ನಮ್ಮ ಸಮಾಜದಲ್ಲಿ ಕೆಲವು ದೋಷಗಳಿವೆ, ಭೇದಗಳಿವೆ. ತಮ್ಮ ಜಾತಿ, ಪಂಥ, ಭಾಷೆ ಸಂಪ್ರದಾಯಗಳನ್ನಿಟ್ಟುಕೊಂಡು ದರ್ಪ ತೋರಿಸುವ ಕೆಲವು ಸಂಗತಿಗಳು ನಡೆಯುತ್ತವೆ. ಇದರಿಂದಾಗಿ ಆಗಬಾರದ ಕೆಲವು ಘಟನೆಗಳು ಘಟಿಸುತ್ತವೆ. ಒಂದೇ ಸಮಾಜದ ಯಾವುದೇ ಬಂಧುವಿಗೆ ಆತ ಒಂದು ವಿಶಿಷ್ಟ ಜಾತಿ ಅಥವಾ ವರ್ಗಕ್ಕೆ ಸೇರಿದ್ದಾನೆ ಎನ್ನುವ ಕಾರಣಕ್ಕಾಗಿ, ಜಾತಿ ಅಭಿಮಾನದ ಅಹಂಕಾರವನ್ನಿಟ್ಟುಕೊಂಡ ಜನರಿಂದ ಅವಮಾನ ಮತ್ತು ದೌರ್ಜನ್ಯವನ್ನು ಎದುರಿಸಬೇಕು ಎನ್ನುವುದು ಭಾರತೀಯರಾದ ನಮಗೆ ಶೋಭೆ ತರುವ ವಿಷಯವಲ್ಲ, ಇದು ನಾಚಿಕೆಗೇಡಿನ ವಿಷಯ.

ಕೆಲವೊಮ್ಮೆ ಘಟನೆ ಚಿಕ್ಕದಾಗಿದ್ದರೂ ಅದನ್ನು ದೊಡ್ಡದು ಮಾಡಿ ಚಿಕ್ಕ ಹುಣ್ಣನ್ನು ದೊಡ್ಡ ವ್ರಣವಾಗಿಸುವ ಕೆಲಸವನ್ನು ಮಾಧ್ಯಮಗಳಲ್ಲಿ ಪ್ರಭಾವವಿರುವ ಜನರು ಮಾಡುತ್ತಾರೆ. ಕೆಲವೊಮ್ಮೆ ನಡೆಯದಿರುವ ಘಟನೆಯನ್ನು ನಡೆದಿದೆ ಎಂದು ಅಸತ್ಯ ಪ್ರಚಾರ ಮಾಡಿ ತಮ್ಮ ಕಾರ್ಯಸಾಧಿಸುವ ಕೆಲಸವನ್ನು ಅವರು ಮಾಡುತ್ತಾರೆ. ಭಾರತದ ಸರ್ಕಾರ ಭಾರತದ ಜನರ ವಿಶ್ವಾಸ ಗಳಿಸದೇ ಇರಲಿ ಎಂದು ಅವರು ಬಯಸುತ್ತಾರೆ. ದೇಶಕ್ಕಾಗಿ ಭಾರತೀಯರು ಒಂದುಗೂಡದೇ ಇರಲಿ ಎಂದು ಅವರು ಪ್ರಯತ್ನಿಸುತ್ತಾರೆ. ಅಂಥವರಿಂದ ನಾವು ಸಾವಧಾನವಾಗಿರಬೇಕು. ಇಂತಹ ವಿಘಟಕ ಶಕ್ತಿಗಳ ಜಾಲದಲ್ಲಿ ಬೀಳದಂತೆ ನಮ್ಮ ಸಮಾಜವನ್ನು ಜಾಗೃತಗೊಳಿಸಬೇಕು ಮತ್ತು ಅಂಥವರು ಲಾಭ ಪಡೆದುಕೊಳ್ಳಲು ಭೇದಗಳು ಇರದಂತೆ ನಮ್ಮ ಸಮಾಜವನ್ನು ದೃಢಗೊಳಿಸಬೇಕು.

### ಸ್ವಾವಲಂಬಿ ಸ್ವಾಭಿಮಾನಿ ಸಂವೇದನಶೀಲರನ್ನು ಶಿಕ್ಷಣ ನಿರ್ಮಿಸಲಿ

ಶಿಕ್ಷಣವು ವ್ಯಕ್ತಿಗೆ ಜೀವನೋಪಾಯವನ್ನು ಕಲಿಸಬೇಕು; ಅವನನ್ನು ಸ್ವಾವಲಂಬಿಯನ್ನಾಗಿ ಮಾಡಬೇಕು. ಆತ್ಮವಿಶ್ವಾಸವನ್ನು ತುಂಬಬೇಕು. ಆತನ ಕ್ಷಮತೆ ಹೆಚ್ಚಾಗಬೇಕು, ಜ್ಞಾನವೃದ್ಧಿಯಾಗಬೇಕು. ಇದರೊಂದಿಗೆ ಆತನಲ್ಲಿ ಸಮಾಜ, ದೇಶ, ನೆರೆಹೊರೆ, ತನ್ನ ಊರು ನಗರಗಳ ಕುರಿತು ಜವಾಬ್ದಾರಿ ಸಂವೇದನೆ ಹುಟ್ಟಬೇಕು. ಹಾಗೆಯೇ ಶಿಕ್ಷಣ ಎಲ್ಲರಿಗೂ ಸುಲಭವಾಗಿ ಸಿಗುವ ಹಾಗೆ ಇರಬೇಕು. ಆದ್ದರಿಂದ ಶಿಕ್ಷಣ ದುಬಾರಿ ಆಗಿರಬಾರದು. ಸಾಮಾನ್ಯ ಜನರಿಗೂ ಕೈಗೆಟುಕುವಂತಿರಬೇಕು, ಸಿಗುವಂತಿರಬೇಕು.

ಶಿಕ್ಷಣದ ಮೂಲ ಉದ್ದೇಶಕ್ಕನುಗುಣವಾದ ಪಾಠ್ಯಕ್ರಮವಿರಬೇಕು. ಜೊತೆಗೆ ಅಂತಹ ಪಾಠ್ಯಕ್ರಮವನ್ನು ಅರ್ಥೈಸಿಕೊಂಡು ಕಲಿಸಬಲ್ಲ ಶಿಕ್ಷಕರೂ ತಯಾರಾಗಬೇಕು. ಶಿಕ್ಷಕರಲ್ಲಿ ಕೇವಲ ತಿಂಗಳ ಸಂಬಳ ಎಣಿಸುವ ಪ್ರವೃತ್ತಿಯಿರದೇ ದೇಶದ ಮುಂದಿನ ಪೀಳಿಗೆಯನ್ನು ತಯಾರಿಸುವ ಜವಾಬ್ದಾರಿ ತನ್ನ ಮೇಲಿದೆ ಎನ್ನುವ ಕರ್ತವ್ಯಬೋಧೆಯಿರಬೇಕು. ಈ ರೀತಿಯಲ್ಲಿ ಆತನಿಗೆ ತರಬೇತಿ ಇರಬೇಕು, ಅವನಲ್ಲಿ ಅಂತಹ ಪ್ರೇರಣೆ ಸದಾ ಜಾಗೃತವಾಗಿರಬೇಕು.


*(2ನೇ ಪುಟಕ್ಕೆ)*


### ಸೇನೆಯ ಶೌರ್ಯ ಅಭಿನಂದನೀಯ

ಕಾಶ್ಮೀರದ ಭಯೋತ್ಪಾದನೆಯನ್ನು ಉತ್ತೇಜಿಸುವ ಕೆಲಸ ಗಡಿಯಾಚೆಯಿಂದ ನಡೆಯುತ್ತದೆ ಎನ್ನುವುದು ಪ್ರಪಂಚಕ್ಕೇ ತಿಳಿದಿರುವ ವಿಷಯ. ಅವರಿಗೆ ಸರಿಯಾದ ಉತ್ತರವನ್ನೂ ನಮ್ಮ ಸರ್ಕಾರ ನೀಡಿದೆ. ಸರ್ಕಾರದ ನೇತೃತ್ವದಲ್ಲಿ ನಮ್ಮ ಸೇನೆ ಸಾಹಸ ಶೌರ್ಯ ಪೂರ್ವಕವಾಗಿ ಕಾರ್ಯವನ್ನು ಯಶಸ್ವಿಗೊಳಿಸಿದೆ. ಇದರಿಂದ ಮತ್ತೆ ವಿಶ್ವದಲ್ಲಿ ಭಾರತೀಯ ಸೇನೆಯ ಹೆಮ್ಮೆ ಮೇಲೆರಿದೆ, ಭಾರತದ ಗೌರವವೂ ಹೆಚ್ಚಾಗಿದೆ. ಜೊತೆಗೆ ಸಹನೆಗೂ ಒಂದು ಮಿತಿ ಇದೆ ಎನ್ನುವ ಸಂದೇಶ ಭಯೋತ್ಪಾದನೆಯನ್ನು ಪ್ರೋತ್ಸಾಹಿಸುವವರಿಗೂ ತಲುಪಿದೆ. ಗಡಿರಕ್ಷಣೆಯ ಕಾರ್ಯ ನಡೆಯಬೇಕು. ಗಡಿಪ್ರದೇಶದ ಪ್ರಾಂತಗಳಲ್ಲಿ ಸಮಾಜವನ್ನು ಸಂಘಟಿಸಿ ಅಲ್ಲಿನ ನಿವಾಸಿಗಳ ಮನೋಧೈರ್ಯವನ್ನು ಹೆಚ್ಚಿಸುವ ಅನೇಕ ಸೇವಾ ಕಾರ್ಯಗಳನ್ನು ಸಂಘದ ಸ್ವಯಂಸೇವಕರು ನಡೆಸುತ್ತಿದ್ದಾರೆ. ಗಡಿಭದ್ರತಾ ಪಡೆ ಮತ್ತು ಸ್ಥಳೀಯ ನಿವಾಸಿಗಳಲ್ಲಿ ಒಳ್ಳೆಯ ಸಂಬಂಧ ಸ್ಥಾಪನೆಯಾಗಿ ಒಬ್ಬರಿಂದ ಇನ್ನೊಬ್ಬರಿಗೆ ಸಹಕಾರವಾಗುವ ವಾತಾವರಣ ನಿರ್ಮಾಣ ಮಾಡುವ ಪ್ರಯತ್ನ ನಡೆಸುತಿದ್ದಾರೆ.

ಶಿಕ್ಷಣ ಸ್ವತಂತ್ರ ಮತ್ತು ಸಮಾಜಾಧಾರಿತವಾಗಿರಬೇಕು. ಸಮಾಜವೇ ಶಿಕ್ಷಣ ವ್ಯವಸ್ಥೆಯನ್ನು ನಡೆಸಬೇಕು. ಆದರೆ ಶಿಕ್ಷಣದ ವಾಣಿಜ್ಯೀಕರಣವಾಗಬಾರದು. ಆದ್ದರಿಂದ ಎಲ್ಲರಿಗೂ ಸುಲಭದಲ್ಲಿ ಶಿಕ್ಷಣ ದೊರಕುವಂತಾಗಲು, ವಾಣಿಜ್ಯೀಕರಣವಾಗದಂತೆ ತಡೆಯಲು ಸರ್ಕಾರವೂ ಶಿಕ್ಷಣ ಕ್ಷೇತ್ರದಲ್ಲಿ ಇರಬೇಕು.

ಕೇವಲ ವಿದ್ಯಾಲಯ ಮಹಾವಿದ್ಯಾಲಯಗಳಲ್ಲಿ ಮಾತ್ರ ಶಿಕ್ಷಣ ಸಿಗುವುದಲ್ಲ. ನಮ್ಮ ನಮ್ಮ ಕುಟುಂಬ ಪರಿವಾರಗಳಲ್ಲೂ ಶಿಕ್ಷಣ ದೊರೆಯುತ್ತದೆ. ನಮ್ಮ ಸಂಬಂಧಿಗಳು, ಸಹಕಾರಿಗಳು, ಸಾಕುಪ್ರಾಣಿಗಳು – ಇವರೆಲ್ಲರಿಂದ ನಮ್ಮ ಜೀವನ ಸಾಗುತ್ತದೆ. ಇವರೊಂದಿಗೆ ಹೇಗೆ ವ್ಯವಹರಿಸಬೇಕು ಎನ್ನುವ ಶಿಕ್ಷಣವೂ ನಮ್ಮ ಮಕ್ಕಳಿಗೆ ಸಿಗಬೇಕು. ಮನೆಯಲ್ಲಿ ಹಬ್ಬ ಹರಿದಿನಗಳು ನಡೆಯಬೇಕು, ಹಿರಿಯ ಕಿರಿಯರ ಮಧ್ಯೆ ಸಂವಾದ ನಡೆಯಬೇಕು. ಸಂಸ್ಕಾರ, ಆಚರಣೆ, ವ್ಯವಹಾರ, ಕರ್ತವ್ಯಬೋಧೆ ಮುಂತಾದವುಗಳ ಮೂಲಕ ಶಿಕ್ಷಣ ದೊರೆಯುವ ಪ್ರಥಮ ಸ್ಥಾನ ಕುಟುಂಬ. ಅಲ್ಲಿಂದಲೇ ಶಿಕ್ಷಣ ಕಾರ್ಯ ಆರಂಭವಾಗಬೇಕು.


ಆದ್ಯ ಸರಸಂಘಚಾಲಕ ಡಾ॥ ಹೆಡಗೆವಾರ್ ಅವರಿಗೆ ನಮನ ಸಲ್ಲಿಸುತ್ತಿರುವ ಮೋಹನ್ ಭಾಗವತ್ (ಹೊಸ ಗಣವೇಶದಲ್ಲಿ)

### ಕಾಲಾನುಕೂಲವಾಗಿ ನಮ್ಮ ಆಚರಣೆಗಳನ್ನು ಬದಲಾಯಿಸಿಕೊಳ್ಳಬೇಕು

ಭಾರತ ಒಂದು ಅಮರ ರಾಷ್ಟ್ರ. ತನ್ನದೇ ಮೋಹಜಾಲದಲ್ಲಿ ಭೇದಗಳಲ್ಲಿ ಸಿಲುಕಿರುವ ಇಂದಿನ ಮಾನವಸಮುದಾಯಕ್ಕೆ ಹಿತವನ್ನುಂಟುಮಾಡುವುದು ಭಾರತದ ಕರ್ತವ್ಯವಾಗಿದೆ. ಈ ಕೆಲಸವನ್ನು ಭಾರತವೇ ಮಾಡಬೇಕು. ಪೃಥ್ವಿಯ ಮೇಲೆ ಮಾನವತೆ ಇರುವವರೆಗೆ ಈ ಕೆಲಸದ ಆವಶ್ಯಕತೆ ಇದ್ದೇ ಇರುವುದು. ಅದಕ್ಕಾಗಿಯೇ ಭಾರತ ಎದ್ದು ನಿಂತಿರುವುದು. ಈ ಶಕ್ತಿಯನ್ನೇ ಹಿಂದುತ್ವ ಎಂದು ಕರೆಯುತ್ತೇವೆ. ಇದುವೇ ನಮ್ಮ ಸಂಸ್ಕೃತಿ. ಇಂದಿನ ಕಾಲಕ್ಕೆ ಅನುಸಾರವಾಗಿ ಅದನ್ನು ರೂಪುಗೊಳಿಸಬೇಕು. ಅದರ ಆಚರಣಾ ಧರ್ಮವನ್ನು ಬದಲಿಸಬೇಕು. ನಮ್ಮ ಆಚರಣೆಯಿಂದ ವಿಶ್ವದ ಮುಂದೆ ಉದಾಹರಣೆಯನ್ನು ಇಡಬೇಕು. ಕೇವಲ ಅನುಕರಣೆಯಿಂದ ಏನೂ ಸಾಧ್ಯವಿಲ್ಲ. ಇದು ನಮ್ಮ ದೇಶ ಅದರ ಇಂದಿನ ಸ್ಥಿತಿಯಿದೆ, ಹಿಂದೆ ಪರಂಪರೆಯಿದೆ. ನಮ್ಮ ವೈಚಾರಿಕತೆಯ ಆಧಾರದ ಮೇಲೆ, ನಮ್ಮ ಪರಂಪರೆಯ ಆಚರಣೆಗಳನ್ನು ಕಾಲಕ್ಕೆ ತಕ್ಕಂತೆ ಹೊಂದಿಸಿಕೊಂಡು, ವಿಜ್ಞಾನ ತಂತ್ರಜ್ಞಾನಗಳ ಜ್ಞಾನವನ್ನು ದೇಶಕ್ಕೆ ಅನುಕೂಲವಾಗುವಂತೆ ಬಳಸಿಕೊಂಡು ಸಮಾಜವನ್ನು ನಡೆಸಬೇಕು. ಸಮಾಜವನ್ನು ಸರಿಯಾದ ಮಾರ್ಗದಲ್ಲಿ ನಡೆಸಲು ಪ್ರಯತ್ನ ಮಾಡಬೇಕು. ಏಕೆಂದರೆ ಸಮಾಜವೇ ಶಾಸನ ವ್ಯವಸ್ಥೆಗೆ ಜನರನ್ನು ಕಳುಹಿಸುತ್ತದೆ. ಸಮಾಜದಿಂದಲೇ ಶಿಕ್ಷಣ ಪಡೆದ ವ್ಯಕ್ತಿಗಳು ಶಾಸನ ವ್ಯವಸ್ಥೆಗೆ ಹೋಗುತ್ತಾರೆ. ಆದ್ದರಿಂದ ಸಮಾಜವನ್ನು ಸರಿಮಾಡುವುದು ಕಠಿಣ ಕೆಲಸವಾದರೂ ಅನಿವಾರ್ಯವಾಗಿದೆ.

### ಇಡೀ ಸಮಾಜವೇ ಸಂಘವಾಗಲಿ

ಸಮಾಜವನ್ನು ಸಂಘಟಿಸುವ ದೃಷ್ಟಿಯಿಂದಲೇ ರಾಷ್ಟ್ರೀಯ ಸ್ವಯಂಸೇವಕ ಸಂಘ ಕೆಲಸಮಾಡುತ್ತದೆ. ಸಂಘದ ಸ್ವಯಂಸೇವಕರು ಗೋರಕ್ಷಣೆ, ಗ್ರಾಮವಿಕಾಸ, ಕುಟುಂಬ ಪ್ರಬೋಧನ ಮುಂತಾದ ಚಟುವಟಿಕೆಗಳನ್ನು ನಡೆಸುತ್ತಾರೆ. ಈ ಎಲ್ಲ ಕಾರ್ಯಗಳಿಂದ ಸಮಾಜದಲ್ಲಿ ಒಳ್ಳೆಯ ಆಚರಣೆ ವಾತಾವರಣ ಉಂಟಾಗಬೇಕು, ಅದಕ್ಕಾಗಿ ವ್ಯಕ್ತಿ ವ್ಯಕ್ತಿಗಳನ್ನು ಜೋಡಿಸಿ, ಶಾಖೆಗಳ ಮೂಲಕ ಹೃದಯದ ಸ್ವಾರ್ಥ ಭೇದಗಳ ಕಲುಷಿತತೆ ದೂರವಾಗಿ ಪವಿತ್ರ ಮಾತೃಭೂಮಿಯ ಭಕ್ತಿಗಾಗಿ ಸದ್ಗುಣ ಸಂಪನ್ನ ವ್ಯಕ್ತಿಯಾಗಿ ತಯಾರಾಗಲಿ, ಹಾಗೂ ಇಂತಹ ಗುಣಸಂಪನ್ನ ವ್ಯಕ್ತಿಗಳನ್ನು ಸಮಾಜದ ಹಿತಕ್ಕಾಗಿ ಕಾರ್ಯಮಾಡಲು ಸಕ್ರಿಯಗೊಳಿಸುವ – ಲೋಕಸಂಗ್ರಹ, ಲೋಕಸಂಪರ್ಕ ಮತ್ತು ಲೋಕವ್ಯವಸ್ಥೆಯ ಸಾಧನೆಗಾಗಿ ಸಂಘಕಾರ್ಯ ನಡೆಯುತ್ತಿದೆ. ಈ ಕೆಲಸವನ್ನು ಕೇವಲ ಒಂದು ಸಂಘಟನೆ ಮಾಡಿದರೆ ಸಾಕಾಗುವುದಿಲ್ಲ. ಸಂಘವೂ ಒಂದು ಪ್ರತ್ಯೇಕ ಸಂಘಟನೆಯಾಗಿರಬೇಕೆಂದು ಬಯಸುವುದಿಲ್ಲ. ಇಡೀ ಸಮಾಜವೇ ಸಂಘವಾಗಬೇಕು.

## ಫೇಸ್ಬುಕ್ ಬಳಸುವಾಗ ಇರಲಿ ಈ ಎಚ್ಚರಗಳು

ನಾವು ನಮ್ಮ ಬಗ್ಗೆ ಅನೇಕ ಮಾಹಿತಿಗಳನ್ನು ಫೇಸ್‌ಬುಕ್ ಮೂಲಕ ಇಂಟರ್ನೆಟ್ ಲೋಕಕ್ಕೆ ಹಾಕಿರುತ್ತೇವೆ. ಕೆಲವನ್ನು ನಮ್ಮ ಗೆಳೆಯರಿಗೆ ಮಾತ್ರ ಸಿಗಲಿ ಅಂತ ಮಾಡುತ್ತೇವೆ. ಆದರೆ ಸ್ವಲ್ಪ ಯಾಮಾರಿದರೆ ಸಾಕು, ನಿಮ್ಮ ಮಾಹಿತಿಗಳು ಇತರರ ಪಾಲಾಗುತ್ತದೆ. ಫೇಸ್‌ಬುಕ್ ಖಾತೆಯನ್ನು ಹ್ಯಾಕ್ ಮಾಡಿ ನಿಮ್ಮ ಹೆಸರಿನಲ್ಲಿ ಹ್ಯಾಕರುಗಳು ಸಂದೇಶ, ಪೋಸ್ಟ್ ಕಳುಹಿಸಬಹುದು. ಹ್ಯಾಕ್ ಆಗದಂತೆ ಇರಲು ಕೆಲವು ಎಚ್ಚರಗಳನ್ನು ವಹಿಸಬೇಕಾಗುತ್ತದೆ.




ಕ್ಲಿಷ್ಟವಾದ ಪಾಸ್ವರ್ಡ್ ಬಳಸಿ. ಸುಲಭವಾಗಿ ಊಹಿಸಿ, ಅನೇಕ ಪಾಸ್ ವರ್ಡುಗಳ ಪ್ರೋಗ್ರಾಮ್ ಮೂಲಕ ಪ್ರಯತ್ನಿಸಿ ಖಾತೆಗೆ ಖನ್ನ ಹಾಕಬಹುದು. ನಂಬರ್, ಚಿಹ್ನೆಗಳು ಮತ್ತು ಕ್ಯಾಪಿಟಲ್ ಅಕ್ಷರಗಳು ಇರಲಿ.

ಯಾವುದೇ ಸಂದೇಶಗಳಲ್ಲಿರುವ ಸಂಶಯಾಸ್ಪದ ಲಿಂಕ್ ಬಳಸುವ ಮೊದಲು ಎಚ್ಚರದಲ್ಲಿರಿ. ನಿಮ್ಮ ಗೆಳೆಯರ ಹೆಸರಿನಲ್ಲಿಯೇ ಇರುವ ಪೋಸ್ಟ್ ಬಗ್ಗೆ ಸಂಶಯ ಬಂದರೆ ಅವರನ್ನು ನೇರವಾಗಿ ಸಂಪರ್ಕಿಸಿ ಖಚಿತಪಡಿಸಿಕೊಳ್ಳಿ. ಅವರ ಖಾತೆ ಹ್ಯಾಕ್ ಆಗಿರುವ ಸಾಧ್ಯತೆಯೂ ಇರುತ್ತದೆ.

ನಿಮ್ಮದಲ್ಲದ ಕಂಪ್ಯೂಟರ್/ಮೊಬೈಲುಗಳಲ್ಲಿ ಲಾಗಿನ್ ಆಗುವಾಗ, "Remember me" ಆಯ್ಕೆ ಬಳಸಬೇಡಿ ಮತ್ತು ಬಳಕೆಯ ನಂತರ ಲಾಗೌಟ್ ಆಗಲು ಮರೆಯಬೇಡಿ.

ಫೇಸ್‌ಬುಕ್ ಹೊರತಾದ ಯಾವುದೇ ತಾಣಗಳಲ್ಲಿ ಫೇಸ್‌ಬುಕ್ ಪಾಸ್‌ವರ್ಡ್ ನೀಡಬೇಡಿ. ಕೆಲವು ಹ್ಯಾಕರ್‌ಗಳು, ಫೇಸ್‌ಬುಕ್ ರೀತಿಯೇ ಹೋಲುವ ವೆಬ್‌ಸೈಟ್ ವಿನ್ಯಾಸ ಮಾಡಿ, ನಿಮ್ಮ ಲಾಗಿನ್ ವಿವರಗಳನ್ನು ಕೇಳುತ್ತವೆ. ನೀವು ಯಾಮಾರಿ ವಿವರ ನೀಡಿದಲ್ಲಿ ನಿಮ್ಮ ಖಾತೆಯ ಜುಟ್ಟು ಅವರ ಕೈಯಲ್ಲಿ.

ಬ್ರೌಸರ್ ವಿಳಾಸ ಬರೆಯುವಲ್ಲಿ ಯಾವುದೋ ಸ್ಕ್ರಿಪ್ಟ್ ರನ್ ಮಾಡುವಂತೆ ಯಾವುದೇ ಪೋಸ್ಟ್ ಕಂಡುಬಂದಲ್ಲಿ ಹಾಗೆ ಮಾಡಲು ಹೋಗಬೇಡಿ.

ಯಾವುದೇ ಸ್ಪಾಮ್, ಹ್ಯಾಕಿಂಗ್ ಪ್ರಯತ್ನ ಕಂಡುಬಂದಾಗ, ಅದನ್ನು ಫೇಸ್‌ಬುಕ್‌ಗೆ ತಿಳಿಸಲು "Report Post" ಎಂಬ ಅವಕಾಶ ನೀಡಲಾಗಿರುತ್ತದೆ. ಅದನ್ನು ಬಳಸಿ ವಿವರವನ್ನು ಫೇಸ್‌ಬುಕ್ ಗಮನಕ್ಕೆ ತನ್ನಿ.

ಫೇಸ್‌ಬುಕ್ ಮೆನು ಬಳಸಿ ಸೆಟ್ಟಿಂಗ್ಸ್ –> ಸೆಕ್ಯುರಿಟೀ ಹೋದರೆ, ನಿಮ್ಮ ಖಾತೆ ಬ್ಲಾಕ್ ಆದರೆ ಮರಳಿ ಪಡೆಯಲು ಸಹಕರಿಸಬಹುದಾದ ಗೆಳೆಯರು ಯಾರು, ಯಾವೆಲ್ಲ ಡಿವೈಸ್‌ಗಳನ್ನು ನೀವು ಬಳಸುತ್ತೀರಿ ಎಂಬಿತ್ಯಾದಿ ಮಾಹಿತಿ ನೀಡಬಹುದು. ಖಾತೆ ತೊಂದರೆಯಾದಾಗ, ಇದು ನೆರವಿಗೆ ಬರುತ್ತದೆ.

ಸೆಟ್ಟಿಂಗ್ಸ್–> ಆ್ಯಪ್ ಹೋದರೆ ನಿಮ್ಮ ಖಾತೆಯನ್ನು ಬಳಸಲು ನೀವು ಅಧಿಕಾರ ನೀಡಿದ ಆ್ಯಪ್‌ಗಳ ವಿವರ ಸಿಗುತ್ತದೆ. ನೀವು ಅಂತಹ ಅವಕಾಶ ನೀಡದ ಆ್ಯಪ್ ಅಲ್ಲಿ ಕಂಡುಬಂದರೆ ಅದನ್ನು ಅಲ್ಲಿಂದ ತೆಗೆದುಹಾಕಬಹುದು.

ನಿಮ್ಮ ಖಾತೆಯಲ್ಲಿ ಯಾವುದೇ ಸಂಶಯಾಸ್ಪದ ಚಟುವಟಿಕೆ, ತನ್ನಿಂತಾನೇ ಪೋಸ್ಟ್/ಸಂದೇಶ ರವಾನೆಯಾಗುವುದು ಕಂಡುಬಂದಲ್ಲಿ ಮೊದಲನೆಯದಾಗಿ ನಿಮ್ಮ ಪಾಸ್ವರ್ಡ್ ಬದಲಿಸಿಕೊಳ್ಳಿ. ನಂತರ ಲಾಗೌಟ್ ಆಗಿ ಮತ್ತೆ ಲಾಗಿನ್ ಆಗಿ.

## ಪೈಪ್ ಕಾಂಪೋಸ್ಟಿಂಗ್




### ಮನೆಯಲ್ಲಿಯೇ ಮಾಡಿ ಗೊಬ್ಬರ




- ಪೈಪ್ ಒಳಗೆ ಕಸ ಹಾಕುವ ಮೊದಲು 1 ಕೆ.ಜಿ ಬೆಲ್ಲ ಮತ್ತು ಸೆಗಣಿ ನೀರನ್ನು ಹಾಕಬೇಕು. ಇದರಿಂದ ಜೈವಿಕ ಹುಳುಗಳು ಉತ್ಪತ್ತಿಯಾಗುತ್ತವೆ ಹಾಗೂ ತ್ಯಾಜ್ಯ ಬೇಗನೆ ಕೊಳೆತು ಗೊಬ್ಬರವಾಗಲು ಅನುಕೂಲ ಆಗುತ್ತದೆ. ನಂತರ ಮನೆಯಲ್ಲಿ ದಿನ ನಿತ್ಯ ಉತ್ಪತ್ತಿಯಾಗುವ ಬೇಡವಾದ ಜೈವಿಕ/ಹಸಿ ಕಸವನ್ನು ಹಾಕಬೇಕು. ಪ್ರತಿದಿನ ರಾತ್ರಿ ಕಡ್ಡಾಯವಾಗಿ ಒಂದು ಹಿಡಿ ಮಣ್ಣನ್ನು ಹಾಕಬೇಕು.
- ಭೂಮಿಯಲ್ಲಿ ಕರಗದ ಯಾವುದೇ ವಸ್ತುಗಳನ್ನು ಪೈಪ್ ಒಳಗೆ ಹಾಕಬಾರದು. ವಾರಕ್ಕೊಮ್ಮೆ ಅರ್ಧ ಮಗ್ ನೀರು ಮತ್ತು ಒಂದು ಹಿಡಿ ಮಣ್ಣನ್ನು ಪೈಪ್ ಒಳಗೆ ಹಾಕಬೇಕು. ಪೈಪ್ ಮೇಲ್ಭಾಗವನ್ನು ಮರದ ತುಂಡು ಅಥವಾ ಹಂಚಿನಿಂದ ಮುಚ್ಚಬೇಕು.
- ಮನೆಯಲ್ಲಿ ಸಂಗ್ರಹವಾಗುವ ಹಸಿ ತ್ಯಾಜ್ಯದ ಪ್ರಮಾಣಕ್ಕೆ ಅನುಗುಣವಾಗಿ ಸುಮಾರು ಎರಡು ತಿಂಗಳಲ್ಲಿ ಒಂದು ಪೈಪ್ ತ್ಯಾಜ್ಯ ಭರ್ತಿಯಾಗುತ್ತದೆ. ಬಳಿಕ ಅಳವಡಿಸಲಾಗಿರುವ ಇನ್ನೊಂದು ಪೈಪ್‌ನಲ್ಲಿ ತ್ಯಾಜ್ಯ ಸುರಿಯಲು ಆರಂಭಿಸಬೇಕು. ಮೊದಲ ಪೈಪನ್ನು ಎರಡು ತಿಂಗಳು ಬಿಟ್ಟು ತೆಗೆದಾಗ ಉತ್ತಮ ಗುಣಮಟ್ಟದ ಸಾವಯವ ಗೊಬ್ಬರ ಸಿಗುತ್ತದೆ
- ಈ ರೀತಿ ಕಾಂಪೋಸ್ಟಿಂಗ್ ಮೂಲಕ ಹಸಿ ಕಸವನ್ನು (ಅನ್ನ, ಮೀನು, ತರಕಾರಿ ಇತ್ಯಾದಿ) ಮನೆಯಲ್ಲಿಯೇ ಸುಲಭವಾಗಿ ಗೊಬ್ಬರ ಮಾಡಬಹುದು
- ಪೈಪ್ ಕಾಂಪೋಸ್ಟ್ ಉಪಯೋಗ – ತ್ಯಾಜ್ಯದ ಮೂಲದಲ್ಲಿಯೇ ನಿರ್ವಹಣೆ ಸಾಧ್ಯ. ಕಡಿಮೆ ಜಾಗ, ಕಡಿಮೆ ಖರ್ಚು, ಸರಳ ರೀತಿಯಲ್ಲಿ ಕಸ ನಿರ್ವಹಣೆ ಸಾಧ್ಯ. ಕಸವನ್ನು ಗೊಬ್ಬರವನ್ನಾಗಿ ಪರಿವರ್ತಿಸಿ ಬಳಸಬಹುದು. ಆರೋಗ್ಯಪೂರ್ಣ ಪರಿಸರ ನಿರ್ಮಾಣ ಸಾಧ್ಯ, ಪರಿಸರ ಮಾಲಿನ್ಯ ತಪ್ಪುತ್ತದೆ
- ಇಷ್ಟೇ ಅಲ್ಲದೇ ಸಾವಯವ ಗೊಬ್ಬರ ಬಳಕೆಯಿಂದ ಗಿಡಗಳಿಗೆ ಬರುವ ನುಸಿ ರೋಗವನ್ನು ಸಹ ತಡೆಗಟ್ಟಬಹುದಾಗಿದೆ.

### ಎಚ್ಚರಿಕೆ

- ನೀರು ನಿಲ್ಲುವ ಜಾಗದಲ್ಲಿ ಪೈಪ್ ನೆಡಬಾರದು. ಪೈಪ್‌ಗಳನ್ನು ಆದಷ್ಟು ಒಣವಾಗಿಟ್ಟುಕೊಳ್ಳಬೇಕು. ಸಾರು, ಗಂಜಿ ಇತ್ಯಾದಿ ದ್ರವ ಪದಾರ್ಥಗಳನ್ನು ಹಾಕಬಾರದು. ಪೈಪ್ ಒಳಗೆ ತೇವ ಹೆಚ್ಚಾದಾಗ ಮರದ ಪುಡಿ, ಒಣಎಲೆ ಪುಡಿ, ಬೂದಿ ಹಾಕಬಹುದು. ವಾರಕ್ಕೊಮ್ಮೆ ಒಂದು ಲೋಟ ಮಜ್ಜಿಗೆ ಹಾಕಿದರೆ ಉತ್ತಮ.
- 6 ಇಂಚು ದಪ್ಪ 6 ಅಡಿ ಎತ್ತರದ ಸಿಮೆಂಟ್, ಮಣ್ಣಿನ ಅಥವಾ ಪಿವಿಸಿ ಪೈಪ್ ಅನ್ನು ಒಂದರಿಂದ ಒಂದೂವರೆ ಅಡಿ ಹೊಂಡ ಮಾಡಿ ಲಂಬವಾಗಿ ನೆಡಬೇಕು.

ಕೃಪೆ: ಪ್ರಜಾವಾಣಿ

ಸಂಪಾದಕೀಯ ಸಹಕಾರ ಸತ್ಯನಾರಾಯಣ ಶಾನುಭೋಗ್, ರಾಜೇಶ್ ಪದ್ಮಾರ್, ಶೈಲೇಶ್ ಕುಲಕರ್ಣಿ, ಶ್ರೀಹರ್ಷ ಪೆರ್ಲ, ಪ್ರತಾಪ ಕೊಡಂಚ, ಶ್ರೀವತ್ಸ, ರಾಧಾಕೃಷ್ಣ ಹೊಳ್ಳ, ಮೊಳಹಳ್ಳಿ ಅನಿಲ್‌ಕುಮಾರ್




**ಕಣಿವೆ ರಾಜ್ಯದಲ್ಲಿ ಕಳೆದ 3 ತಿಂಗಳಿಂದ ನಡೆಯುತ್ತಿರುವ ಹಿಂಸಾಚಾರಕ್ಕೆ ಪ್ರಚೋದನೆ ನೀಡುವ ಮೂಲಕ ರಾಷ್ಟ್ರವಿರೋಧಿ ಚಟುವಟಿಕೆ ನಡೆಸಿದ ಆರೋಪದ ಮೇಲೆ 12 ಅಧಿಕಾರಿಗಳನ್ನು ವಜಾಗೊಳಿಸಿ ಜಮ್ಮು ಮತ್ತು ಕಾಶ್ಮೀರ ಸರ್ಕಾರ ಆದೇಶಿಸಿದೆ. ಪೊಲೀಸ್ ಇಲಾಖೆ ರಾಷ್ಟ್ರ ವಿರೋಧಿ ಚಟುವಟಿಕೆ ನಡೆಸುತ್ತಿದ್ದ ಅಧಿಕಾರಿಗಳ ಕುರಿತು ರಾಜ್ಯ ಸರ್ಕಾರಕ್ಕೆ ವರದಿ ಸಲ್ಲಿಸಿತ್ತು. ಅದರ ಆಧಾರದ ಮೇಲೆ ಕಾಶ್ಮೀರ ವಿಶ್ವವಿದ್ಯಾಲಯದ ಸಹಾಯಕ ರಿಜಿಸ್ಟ್ರಾರ್ ಸೇರಿದಂತೆ ಶಿಕ್ಷಣ, ಹಣಕಾಸು, ಆರೋಗ್ಯ, ಇಂಜಿನಿಯರಿಂಗ್ ಹಾಗೂ ಆಹಾರ ಮತ್ತು ಸರಬರಾಜು ಇಲಾಖೆಯ 12ಅಧಿಕಾರಿಗಳನ್ನು ವಜಾ ಮಾಡಲಾಗಿದೆ. ವಜಾಗೊಂಡಿರುವ ಅಧಿಕಾರಿಗಳ ಕಾಶ್ಮೀರ ಕಣಿವೆಯಲ್ಲಿ ಹಿಂಸಾಚಾರಕ್ಕೆ ತೆರೆಮರೆಯಲ್ಲಿ ಪ್ರಚೋದನೆ ನೀಡುತ್ತಿದ್ದರು. ಇನ್ನಷ್ಟು ಅಧಿಕಾರಿಗಳು ಇಂತಹ ಕಾರ್ಯದಲ್ಲಿ ತೊಡಗಿರುವ ಸಾಧ್ಯತೆ ಇದ್ದು, ಅವರನ್ನು ಪತ್ತೆಹಚ್ಚಲು ಕ್ರಮ ತೆಗೆದುಕೊಳ್ಳಲಾಗಿದೆ. ಜತೆಗೆ ಹಲವು ಅಧಿಕಾರಿಗಳ ಮೇಲೆ ನಿಗಾ ಇಡಲಾಗಿದೆ ಎಂದು ಮೂಲಗಳು ತಿಳಿಸಿವೆ. ಕಳೆದ 26 ವರ್ಷಗಳಲ್ಲಿ 2ನೇ ಬಾರಿಗೆ ರಾಜ್ಯ ಸರ್ಕಾರ ಇಂತಹ ಕಠಿಣ ಕ್ರಮ ತೆಗೆದುಕೊಂಡಿದೆ. ಈ ಮೊದಲು 1990ರಲ್ಲಿ 5 ಅಧಿಕಾರಿಗಳನ್ನು ರಾಷ್ಟ್ರ ವಿರೋಧಿ ಚಟುವಟಿಕೆಯಲ್ಲಿ ಪಾಲ್ಗೊಂಡ ಆರೋಪದ ಮೇಲೆ ವಜಾಗೊಳಿಸಲಾಗಿತ್ತು.**

ಪರಿಶಿಷ್ಟ ಜಾತಿ/ಪಂಗಡಗಳ ದಲಿತರು ಮತ್ತು ಆದಿವಾಸಿಗಳು ಉದ್ಯಮಿಗಳಾಗಿ ಬೆಳೆದು ಇತರರಿಗೆ ಉದ್ಯೋಗ ನೀಡುವಂತಾಗಬೇಕು. ಸ್ಟಾರ್ಟ್ ಅಪ್ ಇಂಡಿಯಾ, ಸ್ಟ್ಯಾಂಡ್ ಅಪ್ ಇಂಡಿಯಾ ಯೋಜನೆ ಅಡಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ಕನಿಷ್ಠ ಒಬ್ಬ ಹೆಣ್ಣು ಮತ್ತು ಒಬ್ಬ ಗಂಡಿಗೆ ಪ್ರತಿ ಶಾಖೆಯೂ 1 ಕೋಟಿ ವರೆಗೆ ಸಾಲ ನೀಡಬೇಕು ಎಂದು ದೇಶದ 1.25 ಲಕ್ಷ ಬ್ಯಾಂಕ್ ಶಾಖೆಗಳಿಗೆ ಸೂಚಿಸಲಾಗಿದೆ. ಇದರಿಂದಾಗಿ ದೇಶದಲ್ಲಿ ಈ ಸಮುದಾಯಗಳಿಗೆ ಸೇರಿದ ಕನಿಷ್ಠ 3.75 ಲಕ್ಷ ಉದ್ಯಮಿಗಳು ತಯಾರಾಗುತ್ತಾರೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದರು. ನಮ್ಮ ದೇಶದ ದಲಿತರು ಅಥವಾ ಆದಿವಾಸಿಗಳಲ್ಲಿರುವ ಮಹತ್ವಾಕಾಂಕ್ಷೆ ಇತರರಿಗಿಂತ ಹೆಚ್ಚು. ಅವರಿಗೆ ಅವಕಾಶಕೊಟ್ಟರೆ ದೇಶದ ಶ್ರೀಮಂತಿಕೆಯನ್ನು ಹೆಚ್ಚಿಸುವಲ್ಲಿ ಅವರು ಹಿಂದೆ ಬೀಳುವುದಿಲ್ಲ ಎಂದರು. 'ರಾಷ್ಟ್ರೀಯ ಎಸ್‌ಸಿ/ಎಸ್‌ಟಿ ಹಬ್'ಗೆ (ರಾಷ್ಟ್ರೀಯ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ಉದ್ಯಮ ಬೆಂಬಲ ಕೇಂದ್ರ) ಚಾಲನೆ ನೀಡಿ ಮೋದಿ ಮಾತನಾಡಿದರು.



**ಉತ್ತರ ಪ್ರದೇಶದಲ್ಲಿರುವ ಹಿಂದುಗಳ ಶ್ರದ್ಧಾಕೇಂದ್ರವಾದ ರಾಮಜನ್ಮಭೂಮಿಯಿಂದ 15 ಕಿ.ಮೀ ದೂರದಲ್ಲಿ 350 ಕೋಟಿ ವೆಚ್ಚದಲ್ಲಿ ರಾಮಾಯಣ ವಸ್ತು ಸಂಗ್ರಹಾಲಯ ಸ್ಥಾಪಿಸಲು ಕೇಂದ್ರ ಸರ್ಕಾರ ಮುಂದಾಗಿದೆ. ಇದಕ್ಕಾಗಿ 25 ಎಕರೆ ಭೂಮಿಯನ್ನು ಗುರುತಿಸಲಾಗಿದೆ. ಅಂತರರಾಷ್ಟ್ರೀಯ ರಾಮಾಯಣ ಸಮ್ಮೇಳನವನ್ನು ಅಯೋಧ್ಯೆ ಅಥವಾ ಚಿತ್ರಕೂಟ ಜಿಲ್ಲೆಯಲ್ಲಿ ನಡೆಸುವ ಚಿಂತನೆ ನಡೆದಿದೆ ಎನ್ನಲಾಗಿದೆ. ಈ ಸಮ್ಮೇಳನದಲ್ಲಿ 12ಕ್ಕೂ ಹೆಚ್ಚು ದೇಶಗಳ ಪ್ರತಿನಿಧಿಗಳು ಭಾಗವಹಿಸುವ ಸಾಧ್ಯತೆ ಇದೆ.**



ಮುಂಬಯಿಯ ಕ್ಷೀರಜಾ ರಾಜೆ 13ರ ಬಾಲೆ. ಮನೆಯಲ್ಲಿ ತಾಯಿ ಮಾಡಿದ ತಿಂಡಿ ರುಚಿಯಾಗಿಲ್ಲ ಎಂದು ರಚ್ಚೆ ಹಿಡಿದಾಗ ಆಕೆಯ ತಾಯಿ ರಸ್ತೆಬದಿಯಲ್ಲೇ ಜೀವನ ಸಾಗಿಸುವ, ಒಂದು ಹೊತ್ತಿನ ತುತ್ತಿಗೂ ಭಿಕ್ಷೆ ಬೇಡುವ ದಯನೀಯ ಪರಿಸ್ಥಿತಿಯ ಮಕ್ಕಳನ್ನು ತೋರಿಸಿದರು. ತಾಯಿಯ ಕಳಕಳಿ ಫಲಿಸಿತು. ಕ್ಷೀರಜಾಳಿಗೆ ಜೀವನದ ಪಾಠ ತಿಳಿಯಿತು. ಅದೇ ದೀಪಾವಳಿಯಂದು ಆಕೆ ಸ್ವತ: ಆಕಾಶಬುಟ್ಟಿಗಳನ್ನು, ಅಲಂಕಾರಿಕ ವಸ್ತುಗಳನ್ನು ತಯಾರಿಸಿ ಮಾರಿದಳು. ಹೀಗೆ ದೊರೆತ ಹಣದಲ್ಲಿ ತಿಂಡಿಯನ್ನು ಖರೀದಿಸಿ ಬಡಮಕ್ಕಳಿಗೆ ಹಂಚಿದ್ದಳು. ಅಂದಿನಿಂದ ಪ್ರತಿ ವರ್ಷವೂ ಕ್ಷೀರಜಾ ದೀಪಾವಳಿಯಂದು ತಾನೇ ತಯಾರಿಸಿದ ಕಾಗದದ ಅಲಂಕಾರಿಕ ವಸ್ತುಗಳು, ಸಂದೇಶ ಪತ್ರಗಳನ್ನು ಮಾರಿ ಅದರಿಂದ ದೊರೆತ ಹಣವೆಲ್ಲವನ್ನೂ ಹಸಿದ ಮಕ್ಕಳ ಆಹಾರಕ್ಕೆಂದೇ ವಿನಿಯೋಗಿಸುತ್ತಿದ್ದಾಳೆ. ತನ್ನ ತಾಯಿ ಕ್ಯಾನ್ಸರ್ ರೋಗಕ್ಕೆ ಚಿಕಿತ್ಸೆಗೊಳಗಾದಾಗ, ನಿರ್ಗತಿಕ ಕ್ಯಾನ್ಸರ್ ರೋಗಿಗಳ ಕುರಿತಾಗಿ ಚಿಂತಿಸಿ 30,000 ರೂ. ದೇಣಿಗೆಯನ್ನು ಸಂಗ್ರಹಿಸಿದ ಕ್ಷೀರಜಾ ಈ ವರ್ಷದ ದೀಪಾವಳಿ ಹಬ್ಬವನ್ನು ಟಾಟಾ ಮೆಮೋರಿಯಲ್ ಆಸ್ಪತ್ರೆಯಲ್ಲಿ ಕ್ಯಾನ್ಸರ್ ರೋಗಕ್ಕೆ ತುತ್ತಾಗಿರುವ ಬಡ ಮಕ್ಕಳಿಗೆ ಕರಕುಶಲ ವಸ್ತುಗಳ ತಯಾರಿಕೆಯನ್ನು ಕಲಿಸುವ ಮೂಲಕ ಆಚರಿಸುತ್ತಿದ್ದಾಳೆ.

## ಮದನ ಮೋಹನ ಮಾಳವೀಯ : ನವೋತ್ಥಾನದ ಹರಿಕಾರ



ಮದನ ಮೋಹನ ಮಾಳವೀಯ ಭಾರತ ಸ್ವಾತಂತ್ರ ಚಳುವಳಿಯಲ್ಲಿ ಅಗ್ರ ರಾಷ್ಟ್ರೀಯ ನಾಯಕರಲ್ಲಿ ಒಬ್ಬರು. 50 ವರ್ಷಗಳ ಕಾಲ ಭಾರತೀಯ ಕಾಂಗ್ರೆಸ್ಸಿನ ಸದಸ್ಯರಾಗಿ ಸ್ವಾತಂತ್ರ್ಯ ಹೋರಾಟಕ್ಕೆ ದಿಗ್ದರ್ಶಕರಾಗಿದ್ದವರು. 1909(ಲಾಹೋರ್), 1918 (ದೆಹಲಿ), 1930 (ದೆಹಲಿ), 1932 (ಕೋಲ್ಕತಾ) ಕಾಂಗ್ರೆಸ್ ಅಧಿವೇಶನಗಳಲ್ಲಿ ಅಧ್ಯಕ್ಷರಾಗಿದ್ದರು. ಸ್ವಾತಂತ್ರ್ಯ ಹೋರಾಟಕ್ಕೆ ಮಾಳವೀಯರ ಕೊಡುಗೆಯನ್ನು ಗೋಖಲೆಯವರು ಒಂದೆಡೆ ಹೀಗೆ ನೆನೆಯುತ್ತಾರೆ: "ಮಾಳವೀಯರು ನಿಜವಾದ ತ್ಯಾಗಜೀವಿ. ಕೈತುಂಬ ಸಂಬಳ, ಐಷಾರಾಮದ ಜೀವನ ನಡೆಸಬಹುದಾಗಿದ್ದ ಅವರು ದೇಶದ ಕಷ್ಟ ನಿವಾರಣೆಗೆ ಜೀವನ ಮುಡುಪಿಟ್ಟರು. ಆದರೆ ಹೋರಾಟದ ಜೀವನ ಅವರನ್ನು ಬಡತನಕ್ಕೆ ನೂಕಿತು. ತಮ್ಮ ಬಹುಮುಖ ಪ್ರತಿಭೆ, ಪಾಂಡಿತ್ಯ ಮತ್ತು ಜನಾನುರಾಗಗಳಿಂದ ಮಹಾತ್ಮ ಗಾಂಧೀಜಿಯವರಿಗೂ ಆದರ್ಶಪ್ರಾಯರಾಗಿದ್ದರು. ಅವರನ್ನು ಹಿಂದೂ ರಾಷ್ಟ್ರೀಯವಾದಿ ಎಂದೇ ಗುರುತಿಸಲಾಗುತ್ತದೆ. ಬದಲಾವಣೆಗಳಿಗೆ ಸುಧಾರಣೆಗಳಿಗೆ ಸದಾ ಮುಕ್ತರಾಗಿದ್ದ ಮಾಳವೀಯರು ತಮ್ಮ ಬಹುಮುಖ ಪ್ರತಿಭೆ, ಪಾಂಡಿತ್ಯ ಮತ್ತು ಜನಾನುರಾಗಗಳಿಂದ "ಮಹಾಮನ" ಎಂದು ಕರೆಸಿಕೊಂಡಿದ್ದರು.

ವೇದಗಳು, ಉಪನಿಷತ್ತು, ಗೀತೆ, ಮಹಾಭಾರತ, ರಾಮಾಯಣ, ಶ್ರುತಿ, ಸ್ಮೃತಿ, ಪುರಾಣ – ಇವುಗಳ ಅಧ್ಯಯನ ಭಾರತೀಯ ಸಂಸ್ಕೃತಿಯ ಪ್ರಧಾನವಾದ ಅಂಶಗಳು ಎಂದು ಮಾಳವೀಯರು ಹೇಳುತ್ತಿದ್ದರು. ಅವರ ಆಶೋತ್ತರಗಳನ್ನು ಕಾರ್ಯರೂಪಕ್ಕೆ ತರಲೆಂದೇ ಕಾಶಿ ಹಿಂದೂ ವಿಶ್ವವಿದ್ಯಾಲಯವನ್ನು ಸಂಸ್ಥಾಪಿಸಿದರು. ಅದು ಅವರ ಜೀವದುಸಿರಾಯಿತು.

**ಶ್ರೇಷ್ಠ ಶಿಕ್ಷಣತಜ್ಞರಾಗಿದ್ದ ಮಾಲವೀಯರ ವಿಚಾರಗಳಲ್ಲಿ :** "ಅಪೂರ್ವ ಪರಂಪರೆಯಿಂದ ಕೂಡಿದ ಹಿಂದು ಧರ್ಮದ ರಕ್ಷಣೆಯನ್ನು ನಮ್ಮ ರಾಷ್ಟ್ರದ ನವ ಯುವಕರು ಮಾಡದೇ ಇದ್ದರೆ ರಾಷ್ಟ್ರದ ತುಂಬೆಲ್ಲ ವಿದ್ಯಾಭ್ಯಾಸ ಇಲ್ಲದವರು, ವಿದ್ಯಾಭ್ಯಾಸವಿದ್ದರೂ ವಿದ್ಯೆಯನ್ನು ಕೆಟ್ಟ ರೀತಿಯಲ್ಲಿ ಉಪಯೋಗಿಸುವವರು, ಉಪಯೋಗವಿಲ್ಲದ ನಿಕೃಷ್ಟ ಮನುಷ್ಯರು ಕಂಡುಬರುತ್ತಾರೆ. ಇದರ ಫಲ ಧರ್ಮದ ಸರ್ವನಾಶ. ಧರ್ಮಕ್ಕೆ ಸಂಕುಚಿತ ಅರ್ಥ ಕೊಡಬೇಕಾಗಿಲ್ಲ. ಆದರೆ ಧರ್ಮವನ್ನು ತಿರಸ್ಕರಿಸಬೇಕಾಗಿಯೂ ಇಲ್ಲ. ಹಿಂದು ಧರ್ಮವನ್ನು ಸರಿಯಾಗಿ ಅರ್ಥ ಮಾಡಿಕೊಂಡರೆ, ಬಾಳಿಗೆ ದಿವ್ಯಜ್ಯೋತಿಯಾಗಬಲ್ಲದು. ಭಾರತದ ಸಂಸ್ಕೃತಿಯನ್ನು ಭಾರತದ ಯುವ ಪೀಳಿಗೆ ತಿಳಿದುಕೊಳ್ಳಬೇಕು."

"ಮನುಷ್ಯ ತನಗೋಸ್ಕರವೇ ಬದುಕಿದರೆ ಸೊಳ್ಳೆ, ತಿಗಣೆಗಳಿಗೂ ಅವನಿಗೂ ವ್ಯತ್ಯಾಸವಿಲ್ಲ. ದೇಶಕ್ಕೋಸ್ಕರ ಬದುಕಬೇಕು, ಧರ್ಮಕ್ಕೋಸ್ಕರ ಬದುಕಬೇಕು. ಇತರರಿಗೋಸ್ಕರ ಬದುಕಬೇಕು. ಪ್ರಪಂಚದಲ್ಲಿಯೇ ಬಹು ಪ್ರಾಚೀನ ಧರ್ಮಗ್ರಂಥಗಳೆಂದರೆ ವೇದಗಳು. ಪಾಶ್ಚಾತ್ಯ ವಿದ್ವಾಂಸರೇ ಇದನ್ನು ಒಪ್ಪುತ್ತಾರೆ. ಭಗವಂತ ಜಗತ್ತನ್ನು ಸೃಷ್ಟಿ ಮಾಡುವ ಮೊದಲು ಬರೀ ಕತ್ತಲೆ ಇದ್ದಿತು, ಕಾಳ್ಗತ್ತಲೆ ಇದ್ದಿತು, ಆಗ ಭಗವಂತ ದಿವ್ಯಪ್ರಭೆಯಿಂದ ಕಾಣಿಸಿಕೊಂಡ ಎಂದು ವೇದಗಳು ಹೇಳುತ್ತವೆ. ಭಗವಂತನಿಗೆ ಬೆಳಕು ಪ್ರಿಯ. ಮನುಷ್ಯ ತನ್ನ ಮನಸ್ಸಿನಲ್ಲಿ ಬದುಕಿನಲ್ಲಿ ಬೆಳಕನ್ನು ಬೆಳೆಸಿಕೊಳ್ಳಬೇಕು." – ಇದು ಮಹಾಮನ ಮದನಮೋಹನ ಮಾಳವೀಯ ಅವರ ಅಮರ ಸಂದೇಶವಾಗಿದೆ.

# ಏಕರೂಪ ನಾಗರಿಕ ಸಂಹಿತೆ: ತಿಳಿಸಿ ನಿಮ್ಮ ಅನಿಸಿಕೆ

ಬೆಂಗಳೂರು: ದೇಶದಲ್ಲಿ ಏಕರೂಪ ನಾಗರಿಕ ಸಂಹಿತೆ ಜಾರಿಗೆ ತರಬೇಕೇ ಎಂಬ ಬಗ್ಗೆ ಕೇಂದ್ರ ಕಾನೂನು ಆಯೋಗ ಸಾರ್ವಜನಿಕರಿಂದ ಅಭಿಪ್ರಾಯ ಆಹ್ವಾನಿಸಿದೆ.

ಸಂವಿಧಾನದ 44ನೇ ವಿಧಿ ಪ್ರಕಾರ, ದೇಶದಲ್ಲಿ ಏಕರೂಪ ನಾಗರಿಕ ಸಂಹಿತೆ ಜಾರಿಗೆ ತರಲು ಸರ್ಕಾರ ಕ್ರಮ ಕೈಗೊಳ್ಳಬೇಕು ಎಂದು ಆಯೋಗ ಹೇಳಿದೆ.

ಸಾಮಾಜಿಕ ತಾರತಮ್ಯವನ್ನು ಕೊನೆಗೊಳಿಸುವ ಉದ್ದೇಶದಿಂದ ಎಲ್ಲ ಧರ್ಮಗಳ ಕೌಟುಂಬಿಕ ಕಾನೂನುಗಳನ್ನು ಪರಿಶೀಲನೆಗೆ ಒಳಪಡಿಸಲಾಗುವುದು ಎಂದು ಆಯೋಗ ಹೇಳಿದೆ.

ಏಕರೂಪ ನಾಗರಿಕ ಸಂಹಿತೆಗೆ ಸಂಬಂಧಿಸಿದಂತೆ ಎಲ್ಲರಿಂದಲೂ ಅಭಿಪ್ರಾಯ ಸಂಗ್ರಹಿಸಲಾಗುವುದು. ನಾಗರಿಕ ಸಂಹಿತೆಯಲ್ಲಿ ಯಾವುದೇ ಒಂದು ಧರ್ಮ ಅಥವಾ ಗುಂಪಿನ ಪ್ರಭಾವ ಹೆಚ್ಚಿರದಂತೆ ನೋಡಿಕೊಳ್ಳುವುದು ಇದರ ಉದ್ದೇಶ ಎಂದು ಆಯೋಗ ಸ್ಪಷ್ಟಪಡಿಸಿದೆ.

ಆಯೋಗ ಕೇಳಿರುವ 16 ಪ್ರಶ್ನೆಗಳಿಗೆ ಉತ್ತರಿಸುವ ಮೂಲಕ ಸಾರ್ವಜನಿಕರು ಏಕರೂಪ ನಾಗರಿಕ ಸಂಹಿತೆ ಕುರಿತು ತಮ್ಮ ಅನಿಸಿಕೆ ತಿಳಿಸಬಹುದು.

### ವೆಬ್‌ಸೈಟ್‌ನಲ್ಲಿದೆ ಪ್ರಶ್ನಾವಳಿ

ಕಾನೂನು ಆಯೋಗ ಜನರ ಮುಂದಿಟ್ಟಿರುವ ಪ್ರಶ್ನೆಗಳ ಸಂಗ್ರಹ ರೂಪ ಇಲ್ಲಿದೆ. ನಾಲ್ಕು ಪುಟಗಳಷ್ಟಿರುವ ಪ್ರಶ್ನಾವಳಿಯನ್ನು http://lawcommissionofindia.nic.in ವೆಬ್‌ಸೈಟ್‌ನಿಂದ ಪಡೆಯಬಹುದು.

### ಕಳುಹಿಸಬೇಕಾದ ವಿಳಾಸ

ಅಭಿಪ್ರಾಯಗಳನ್ನು ನವೆಂಬರ್ 21ರೊಳಗೆ ಇ–ಮೇಲ್ ಅಥವಾ ಅಂಚೆ ಮೂಲಕ ತಿಳಿಸಬಹುದು. ವಿಳಾಸ: ಕೇಂದ್ರ ಕಾನೂನು ಆಯೋಗ, 14ನೇ ಮಹಡಿ, ಎಚ್‌ಟಿ ಹೌಸ್, ಕಸ್ತೂರಬಾ ಗಾಂಧಿ ರಸ್ತೆ, ನವದೆಹಲಿ–110 001, ಇ–ಮೇಲ್: lci-dla@nic.in

### ಆಯೋಗದ ಪ್ರಶ್ನೆಗಳೇನು?

1. ದೇಶದಲ್ಲಿ ಏಕರೂಪ ನಾಗರಿಕ ಸಂಹಿತೆ ಜಾರಿಗೆ ಸರ್ಕಾರ ಕ್ರಮ ಕೈಗೊಳ್ಳಬೇಕು ಎಂಬುದು ತಿಳಿದಿದೆಯೇ?
2. ಮದುವೆ, ವಿಚ್ಛೇದನ, ದತ್ತು ಸ್ವೀಕಾರ, ಜೀವನಾಂಶ, ಆಸ್ತಿ ಹಕ್ಕು ಸೇರಿದಂತೆ ಎಲ್ಲ ವಿಷಯಗಳಿಗೂ ಏಕರೂಪ ನಾಗರಿಕ ಸಂಹಿತೆ ಅನ್ವಯವಾಗಬೇಕೇ?
3. ಈಗಿರುವ ವೈಯಕ್ತಿಕ ಕಾನೂನುಗಳನ್ನು ಸಂಹಿತೆ ವ್ಯಾಪ್ತಿಗೆ ತರಬೇಕೇ? ಇದರಿಂದ ಜನರಿಗೆ ಪ್ರಯೋಜನ ಆಗುತ್ತದೆಯೇ?
4. ಏಕರೂಪ ನಾಗರಿಕ ಸಂಹಿತೆಯಿಂದ ಲಿಂಗ ಸಮಾನತೆ ಸಾಧ್ಯವೇ?
5. ಏಕರೂಪ ನಾಗರಿಕ ಸಂಹಿತೆ ಐಚ್ಛಿಕವಾಗಿರಬೇಕೇ?
6. ಬಹುಪತ್ನಿತ್ವ, ಬಹುಪತಿತ್ವವನ್ನು ನಿಷೇಧಿಸಬೇಕೇ?
7. ತಲಾಖ್ ಪದ್ಧತಿಯನ್ನು ನಿಷೇಧಿಸಬೇಕೇ? ಕೆಲವು ಬದಲಾವಣೆ ತಂದು ಉಳಿಸಿಕೊಳ್ಳಬೇಕೇ?
8. ಆಸ್ತಿಯ ಮೇಲಿನ ಹಕ್ಕನ್ನು ಹಿಂದೂ ಮಹಿಳೆಯರು ಇನ್ನೂ?ಪರಿಣಾಮಕಾರಿಯಾಗಿ ಚಲಾಯಿಸಲು ಕ್ರಮ ಕೈಗೊಳ್ಳಬೇಕೇ?
9. ಕ್ರೈಸ್ತ ದಂಪತಿ ವಿಚ್ಛೇದನ ಪಡೆಯಲು ಎರಡು ವರ್ಷ ಕಾಯಬೇಕು ಎಂಬ ನಿಯಮ ಸಮಾನತೆಗೆ ವಿರುದ್ಧವೇ?
10. ವಿವಾಹಕ್ಕೆ ಒಪ್ಪಿಗೆ ನೀಡಲು ಕನಿಷ್ಠ ಇಂತಿಷ್ಟು ವರ್ಷ ಆಗಿರಬೇಕು ಎಂಬ ನಿಯಮ ಎಲ್ಲರಿಗೂ ಅನ್ವಯವಾಗಬೇಕೇ?
11. ವಿಚ್ಛೇದನ ಪಡೆಯಲು ನೀಡುವ ಕಾರಣಗಳು ಎಲ್ಲ ಧರ್ಮೀಯರಿಗೂ ಒಂದೇ ಆಗಿರಬೇಕೇ?
12. ವಿಚ್ಛೇದನದ ನಂತರ ಮಹಿಳೆಯರಿಗೆ ಜೀವನಾಂಶ ಕೊಡದಿರುವ ಸಮಸ್ಯೆಯನ್ನು ಏಕರೂಪ ನಾಗರಿಕ ಸಂಹಿತೆಯು ಬಗೆಹರಿಸಲಿದೆಯೇ?
13. ವಿವಾಹ ನೋಂದಣಿ ಕಡ್ಡಾಯ ಎಂಬ ನಿಯಮವನ್ನು ಇನ್ನಷ್ಟು ಪರಿಣಾಮಕಾರಿ ಮಾಡುವುದು ಹೇಗೆ?
14. ಅಂತರ್ಜಾತಿ, ಅಂತರ್ ಧರ್ಮೀಯ ವಿವಾಹಿತರ ಹಿತ ಕಾಯಲು ಏನು ಮಾಡಬೇಕು?
15. ಏಕರೂಪ ನಾಗರಿಕ ಸಂಹಿತೆಯಿಂದ ವ್ಯಕ್ತಿಯ ಧಾರ್ಮಿಕ ಆಚರಣೆಯ ಹಕ್ಕಿಗೆ ತೊಂದರೆ ಆಗುತ್ತದೆಯೇ?
16. ಏಕರೂಪ ನಾಗರಿಕ ಸಂಹಿತೆ ಬಗ್ಗೆ ಅರಿವು ಮೂಡಿಸಲು ಏನು ಮಾಡಬೇಕು?

पुंगव PUNGAVA
# 74, Ranga Rao Road,
Shankarapuram, Bangalore - 560 004.
email: editor.pungava@gmail.com
website : www.samvada.org
ತ್ರೈವಾರ್ಷಿಕ ಚಂದಾ : ರೂ. 150.00

REGISTERED NEWS PAPER RNI 36528/79 LICENCED TO POST WITHOUT PREPAYMENT-WPP46 AT BENGALURU PSO, BG-560 026 on 10/25 of every Month REG.NO.CPMG/KA/BGS/102/2015-17
1-11-2016



# ಮತ್ತೆ ಬರುತ್ತಿದೆ ಟಿಪ್ಪು ಜಯಂತಿ: ಸರ್ಕಾರದ ಮೂರ್ಖ ನಿರ್ಧಾರಕ್ಕೆ ಎಲ್ಲೆಡೆ ವಿರೋಧ

ರಾಜ್ಯ ಸರ್ಕಾರ ಕಳೆದ ವರ್ಷ ಟಿಪ್ಪು ಜಯಂತಿಯನ್ನು ಆಚರಿಸಿದಾಗ ರಾಜ್ಯಾದ್ಯಂತ ಇದನ್ನು ವಿರೋಧಿಸಿ ಇಡೀ ಸಮಾಜ ಪ್ರತಿಭಟಿಸಿತ್ತು. ಮಡಿಕೇರಿಯಲ್ಲಿ ವಿ.ಹಿಂ.ಪ. ಕಾರ್ಯಕರ್ತ ಕುಟ್ಟಪ್ಪನವರನ್ನು ಮೆರವಣಿಗೆಯಲ್ಲಿ ಬಂದಿದ್ದ ಟಿಪ್ಪು ಬೆಂಬಲಿಗ ಮತಾಂಧರು ಕೊಲೆ ಮಾಡಿದ್ದರು. ಇಷ್ಟೆಲ್ಲ ನಡೆದಿದ್ದರೂ ಸರ್ಕಾರ ಮಾತ್ರ ಬುದ್ಧಿ ಕಲಿತಂತೆ ಕಾಣುತ್ತಿಲ್ಲ. ಈ ವರ್ಷವೂ ಟಿಪ್ಪು ಜಯಂತಿಯನ್ನು ಆಚರಿಸುವ ನಿರ್ಧಾರ ಸರ್ಕಾರದಿಂದ ಹೊರಬಿದ್ದಿದೆ. ಅಲ್ಪಸಂಖ್ಯಾತರು ಸರ್ಕಾರದ ದಾರಿ ತಪ್ಪಿಸುತ್ತಿದ್ದಾರೋ ಅಥವಾ ಸರ್ಕಾರವೇ ಅಲ್ಪಸಂಖ್ಯಾತರನ್ನು ದಾರಿ ತಪ್ಪಿಸುತ್ತಿದೆಯೋ ಎನ್ನುವುದು ಇಲ್ಲಿ ವಿಚಾರಾರ್ಹ.

ಕಳೆದ ವರ್ಷ ಟಿಪ್ಪು ಜಯಂತಿ ನಡೆದಾಗ, ಇಸ್ಲಾಮಿನಲ್ಲಿ ಯಾರ ಜಯಂತಿಯನ್ನೂ ಆಚರಿಸುವ ಸಂಪ್ರದಾಯ ಇಲ್ಲವೆಂದು ಇಸ್ಲಾಮಿನ ವಿದ್ವಾಂಸರೇ ಅನೇಕರು ಹೇಳಿದ್ದಾರೆ. ಹಾಗಾದರೆ, ಈ ವರ್ಷವೂ ಟಿಪ್ಪು ಜಯಂತಿಯನ್ನು ಆಚರಿಸಬೇಕೆಂಬ ಹಠ ಏಕೆ? ಕನಕದಾಸ, ವಾಲ್ಮೀಕಿ ಮೊದಲಾದ ಮಹಾಪುರುಷರ ಜಯಂತಿಯನ್ನು ಸರ್ಕಾರ ಆಚರಿಸುತ್ತಿದೆ. ಬೇರೆ ಬೇರೆ ಜಾತಿಯವರಿಗೆ ತಮ್ಮ ಜಾತಿಯಲ್ಲಿ ಹುಟ್ಟಿದ್ದ ಇಂತಹ ಮಹಾಪುರುಷರ ಬಗ್ಗೆ ಅಭಿಮಾನವಿದೆ. ಅವರಿಗೆ ಮಾತ್ರವಲ್ಲ ಇಡೀ ಸಮಾಜಕ್ಕೆ ಆ ಮಹಾಪುರುಷರ ಬಗ್ಗೆ ಅಭಿಮಾನವಿದೆ. ಹಾಗೆಯೇ, ಮುಸ್ಲಿಂ ಸಮಾಜಕ್ಕೆ ಅಭಿಮಾನ ಮೂಡಿಸುವಂತಹ ಸಂತ ಶಿಶುನಾಳ ಷರೀಫರಿಲ್ಲವೇ, ಮಿರ್ಜಾ ಇಸ್ಮಾಯಿಲ್, ಅಬ್ದುಲ್ ಕಲಾಂ, ಕಬೀರರಂತಹ ಮಹಾಪುರುಷರಿಲ್ಲವೇ? ಅವರ ಜಯಂತಿಯನ್ನು ಸರ್ಕಾರ ಆಚರಿಸಿದರೆ, ಯಾರಾದರೂ ಏಕೆ ವಿರೋಧ ಮಾಡಿಯಾರು? ಆದರೆ, ಅಂತಹ ಸತ್ಪುರುಷರ ಜಯಂತಿಯನ್ನು ಆಚರಿಸುವ ಬದಲು ಮತಾಂಧ ಟಿಪ್ಪು ಜಯಂತಿ ಏಕೆ?



ಕೊಡಗು, ಮೇಲುಕೋಟೆ, ಮೈಸೂರು, ಚಿತ್ರದುರ್ಗ, ಮಂಗಳೂರು, ನರಗುಂದ, ಕೇರಳ ಮೊದಲಾದೆಡೆಗಳಲ್ಲಿ ಟಿಪ್ಪು ಹೆಸರು ಕೇಳಿದರೆ ಇತಿಹಾಸವನ್ನು ನೆನೆದು ಆಕ್ರೋಶಗೊಳ್ಳುತ್ತಾರೆ ಜನ. ಆತನ ಕ್ರೌರ್ಯ ಅಂತಹದ್ದು. ಹಿಂದುಗಳ ಮೇಲೆ ಆತ ನಡೆಸಿದ ಅತ್ಯಾಚಾರ, ಆಕ್ರಮಣಗಳು ಅಂತಹವು. ಆತನ ಹಿಂದುದ್ವೇಷದ ಕೆಲವು ಉದಾಹರಣೆಗಳು ಇಲ್ಲಿವೆ.

- ಟಿಪ್ಪುವಿನ ದಾಳಿಯ ತೀವ್ರತೆ ಎಷ್ಟಿತ್ತೆಂದರೆ ಕೊಡಗಿನ ಹಲವು ದೇವಸ್ಥಾನಗಳಲ್ಲಿನ ಅರ್ಚಕರೇ ಮಂಗಳೂರಿಗೆ ಓಡಿಹೋದರು. ಹಲವು ದೇವಾಲಯಗಳಲ್ಲಿ ಪೂಜೆಗಳು ನಿಂತುಹೋದವು. ಕೆಲವು ದೇವಸ್ಥಾನಗಳನ್ನು ತರಗೆಲೆ-ಸೊಪ್ಪುಗಳಿಂದ ಅಡಗಿಸಿಡಲಾಯಿತು (ಉದಾಹರಣೆಗೆ, ವೀರಾಜಪೇಟೆ ಮಲೆತಿರಿಕೆ ಭಗವತಿ ದೇವಸ್ಥಾನ). ಮಡಿಕೇರಿಯ ಓಂಕಾರೇಶ್ವರ ದೇವಸ್ಥಾನಕ್ಕೂ ಕಂಟಕ ಬಂದೊದಗಿತ್ತು. ಕೊಡಗಿನ ಅರಸ ಟಿಪ್ಪುವಿನ ಭಯದಿಂದ ಓಂಕಾರೇಶ್ವರ ದೇವಸ್ಥಾನದ ಕಳಶವನ್ನು ತೆಗೆದು ಗುಂಬಜನ್ನು ನಿರ್ಮಿಸಿದ. ದೂರದಿಂದ ನೋಡಿದರೆ ಇದು ಮಸೀದಿಯಂತೆ ಕಾಣುತ್ತಿತ್ತು. ಇಂದಿಗೂ ಓಂಕಾರೇಶ್ವರ ದೇವಸ್ಥಾನ ಗುಂಬಜ್ ಆಕಾರದಲ್ಲೇ ಇದೆ.
- ನರಗುಂದಕ್ಕೆ ಮುತ್ತಿಗೆ ಹಾಕಿದ್ದ ತನ್ನ ಸೈನ್ಯದ ದಳಪತಿಗೆ ಟಿಪ್ಪು ಒಂದು ಪತ್ರ ಬರೆದಿದ್ದ – 'ಒಂದು ವೇಳೆ ದಾಳಿ ಮಾಡಬೇಕಾದ ಸಂದರ್ಭ ಒದಗಿದ್ದೇ ಆದಲ್ಲಿ, ಅಲ್ಲಿ ಜೀವಂತವಾಗಿರುವ ಎಲ್ಲವನ್ನೂ – ಗಂಡಸರೇ ಇರಲಿ, ಹೆಂಗಸರೇ ಇರಲಿ, ಯುವಕರೇ ಇರಲಿ, ಮುದುಕರೇ ಇರಲಿ, ಮಕ್ಕಳು, ನಾಯಿ, ಬೆಕ್ಕು ಮತ್ತು ಜೀವವಿರುವುದೆಲ್ಲವನ್ನೂ ಕತ್ತರಿಸಿ ಹಾಕಿ.' ಇದು ಟಿಪ್ಪು ತನ್ನ ಸೇನೆಗೆ ನೀಡುತ್ತಿದ್ದ ಸೂಚನೆಗಳ ರೀತಿ!
- ಕೊಡಗಿನಲ್ಲಿ ದೇವಪರಂಬು ಎಂಬ ಸ್ಥಳವೊಂದರಲ್ಲೇ ಮತಾಂತರಕ್ಕೆ ಒಪ್ಪದ 30,000 ಹಿಂದುಗಳನ್ನು ಕೊಲೆಗೈದಿದ್ದಲ್ಲದೇ ಅಳಿದುವರನ್ನು ಬಲಾತ್ಕಾರವಾಗಿ ಮತಾಂತರಿಸಿದ. ಕೊಡಗಿನಲ್ಲಿ ಇಂದಿಗೂ ಕೊಡವ ಮನೆತನದ ಹೆಸರುಳ್ಳ ಅನೇಕ ಮುಸ್ಲಿಮ್ ಕುಟುಂಬಗಳನ್ನು ಕಾಣಬಹುದು.
- 'ನನ್ನ ಈ ಖಡ್ಗವು ಕಾಫಿರರ ನಾಶಕ್ಕಾಗಿ ಝಳಪಿಸುತ್ತಿದೆ. ಓ ಭಗವಂತ, ಮೊಹಮದರ ಮತವನ್ನು ಪ್ರಸಾರ ಮಾಡುವವನನ್ನು ವಿಜಯಶಾಲಿಯಾಗಿ ಮಾಡು.' – ಎಂಬುದು ಅವನ ಖಡ್ಗದ ಮೇಲೆ ಪರ್ಷಿಯನ್ ಭಾಷೆಯಲ್ಲಿ ಬರೆದಿದ್ದ ವಾಕ್ಯ.
- ಶ್ರೀರಂಗಪಟ್ಟಣದ ಮೂಡಬಾಗಿಲು ಆಂಜನೇಯ ದೇವಸ್ಥಾನ ಮಸೀದಿಯಾಗಿ, ಮದರಸಾವಾಗಿ ಆತನ ಆಕ್ರಮಣಕ್ಕೆ ಇಂದಿಗೂ ಸಾಕ್ಷಿಯಾಗಿ ನಿಂತಿದೆ. ದಕ್ಷಿಣ ಭಾರತದಲ್ಲಿ ಆತ ನಾಶ ಮಾಡಿದ ದೇವಾಲಯಗಳ ಸಂಖ್ಯೆ 800ಕ್ಕೂ ಹೆಚ್ಚು ಎಂದು ಆತನ ದಾಖಲೆಗಳೇ ಹೇಳುತ್ತವೆ.

ಈ ವರ್ಷವೂ ಟಿಪ್ಪು ಜಯಂತಿಗೆ ಸಮಾಜದ ಎಲ್ಲೆಡೆ ವಿರೋಧ ಕೇಳಿ ಬರುತ್ತಿದೆ. ಚಿತ್ರದುರ್ಗದ ವೀರ ಮದಕರಿ ನಾಯಕ ಗೌರವ ಸಂರಕ್ಷಣಾ ವೇದಿಕೆ ಹಾಗೂ ಕೊಡಗಿನ ಸಂಘಟನೆಗಳು ಈಗಾಗಲೇ ಇದನ್ನು ವಿರೋಧಿಸಿ ಪ್ರತಿಭಟನೆಗಳನ್ನು ಹಮ್ಮಿಕೊಂಡಿವೆ. ಟಿಪ್ಪುವಿನಂತಹ ಹಿಂದುವಿರೋಧಿ, ಕ್ರೂರಿ ರಾಜನನ್ನು ಮರೆಯುವ ಬದಲು ಮತ್ತೂ ವೈಭವೀಕರಿಸುವ ಸರ್ಕಾರದ ಈ ಕ್ರಮವನ್ನು ಇಡೀ ಸಮಾಜ ವಿರೋಧಿಸಬೇಕಾದ ಅಗತ್ಯವಿದೆ.

## ಉನ್ನತಮಟ್ಟದ ವೃತ್ತಿಪರ ಶಿಕ್ಷಣ ತರಬೇತಿಗೆ ವಿದ್ಯಾರ್ಥಿನಿಯರಿಂದ ಅರ್ಜಿ ಅಹ್ವಾನ

ಗ್ರಾಮೀಣ ಪ್ರದೇಶದಲ್ಲಿ ಆರ್ಥಿಕವಾಗಿ ಹಿಂದುಳಿದ ಬುದ್ಧಿವಂತ ಹಾಗೂ ಪ್ರತಿಭಾವಂತ ವಿದ್ಯಾರ್ಥಿನಿಯರು ಬಹಳಷ್ಟು ಇದ್ದಾರೆ. ಉತ್ತಮ ಅವಕಾಶಗಳ ಮಾಹಿತಿಗಳ ಕೊರತೆ ಹಾಗೂ ಆರ್ಥಿಕ ಸಮಸ್ಯೆಗಳಿಂದಾಗಿ ತಮ್ಮ ಸಾಮರ್ಥ್ಯದ ಸದುಪಯೋಗ ಪಡೆಯದೇ ಅವಕಾಶ ವಂಚಿತರಾಗುತ್ತಿದ್ದಾರೆ. ಇಂತಹ ಹೆಣ್ಣುಮಕ್ಕಳಿಗೆ ಬೆಂಬಲ ನೀಡಿದಲ್ಲಿ ಅವರು ತಮ್ಮ ಸಾಮರ್ಥ್ಯವನ್ನು ಅರಿತು ಯಶಸ್ಸಿನ ಮೆಟ್ಟಿಲೇರುವುದರ ಜೊತೆಗೆ ಸಮಾಜದ ಪರಿವರ್ತನೆಗೆ ತಮ್ಮ ಪುಟ್ಟಕಾಣಿಕೆಯನ್ನು ಕೊಡಬಲ್ಲವರಾಗುತ್ತಾರೆ. ಇಂತಹ ಪ್ರತಿಭಾವಂತ ವಿದ್ಯಾರ್ಥಿನಿಯರಿಗೆ ನೆರವಾಗುವ ಉದ್ದೇಶದಿಂದ ರಾಷ್ಟ್ರೋತ್ಥಾನ ಪರಿಷತ್ 'ಸಾಧನಾ' ಯೋಜನೆಯನ್ನು ಪ್ರಾರಂಭಿಸಿದೆ.

'ಸಾಧನಾ' ಮೂಲಕ ಆರ್ಥಿಕವಾಗಿ ದುರ್ಬಲವಾಗಿರುವ ಕುಟುಂಬಗಳ ಪ್ರತಿಭಾವಂತ **ವಿದ್ಯಾರ್ಥಿನಿಯರಿಗೆ** ಬೆಂಗಳೂರಿನಲ್ಲಿ ಉಚಿತ ಊಟ, ಆಹಾರ, ವಸತಿಯೊಂದಿಗೆ 2 ವರ್ಷಗಳ ಪಿಯುಸಿ ಶಿಕ್ಷಣ ಹಾಗೂ NEET/CET ಪ್ರವೇಶ ಪರೀಕ್ಷೆಗೆ ಅಗತ್ಯ ತರಬೇತಿ ನೀಡಲು ನಿರ್ಧರಿಸಿದೆ. ಪ್ರಸಕ್ತ ಸಾಲಿನಲ್ಲಿ ಹತ್ತನೇ ತರಗತಿ ಪೂರೈಸುವ 50ಪ್ರತಿಭಾವಂತ ವಿದ್ಯಾರ್ಥಿನಿಯರನ್ನು ರಾಜ್ಯಾದ್ಯಂತ ಆಯ್ಕೆ ಮಾಡಲಿದ್ದು, ಅರ್ಹ ವಿದ್ಯಾರ್ಥಿನಿಯರಿಂದ ಅರ್ಜಿ ಅಹ್ವಾನಿಸಲಾಗಿದೆ.

ಅರ್ಜಿಯನ್ನು ಸಾಧನಾ ಅಂತರ್ಜಾಲ ತಾಣ www.rpsaadhana.org ನಿಂದ ಡೌನ್‌ಲೋಡ್ ಮಾಡಿ ವಿವರಗಳನ್ನು ಭರ್ತಿಮಾಡಿ, ವಿದ್ಯಾರ್ಥಿನಿಯು ಓದುತ್ತಿರುವ ಶಾಲೆಯ ಮುಖ್ಯೋಪಾಧ್ಯಾಯರ ಸಹಿಯೊಂದಿಗೆ ಅರ್ಜಿ ಸಲ್ಲಿಸಬೇಕು.

**ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: ಡಿಸೆಂಬರ್ 10.**

ಡಿಸೆಂಬರ್ 25ರಂದು ಕರ್ನಾಟಕದ ಎಲ್ಲಾ ಜಿಲ್ಲಾ ಕೇಂದ್ರ ಮತ್ತು ಕೆಲವು ಪಟ್ಟಣಗಳಲ್ಲಿ ಲಿಖಿತಪರೀಕ್ಷೆ ನಡೆಯಲಿದೆ.

ಹೆಚ್ಚಿನ ಮಾಹಿತಿಗಾಗಿ:
**080–26612652, 94812 01144, 94482 84615**

## ಸರಸ್ವತಿ ನದಿ ಅಸ್ತಿತ್ವದಲ್ಲಿತ್ತು: ತಜ್ಞರ ವರದಿ

**ಅಂಕಿ-ಅಂಶಗಳು**



**4,000** ಕಿ.ಮೀ.
ನದಿಯ ಒಟ್ಟು ಉದ್ದ

**3,000** ಕಿ.ಮೀ.
ಭಾರತದಲ್ಲಿ ನದಿ ಹರಿಯುತ್ತಿದ್ದ ಉದ್ದ

**1,000** ಕಿ.ಮೀ.
ಪ್ರಸ್ತುತ ಪಾಕಿಸ್ತಾನವಾಗಿರುವ ಭಾಗದಲ್ಲಿ ಹರಿಯುತ್ತಿದ್ದ ನದಿಯ ಉದ್ದ

ಸರಸ್ವತಿ ನದಿ ಕಾಲ್ಪನಿಕವಲ್ಲ. ಅದು ವಾಸ್ತವವಾಗಿ ಅಸ್ತಿತ್ವದಲ್ಲಿತ್ತು ಎಂದು ತಜ್ಞರ ಸಮಿತಿ ದಾಖಲೆಗಳೊಂದಿಗೆ ತಿಳಿಸಿದೆ. ಸರಸ್ವತಿ ನದಿಯು ಹಿಮಾಲಯದಲ್ಲಿ ಹುಟ್ಟಿ ಹರಿಯಾಣ, ರಾಜಸ್ಥಾನ ಹಾಗೂ ಉತ್ತರ ಗುಜರಾತ್‌ನಲ್ಲಿ ಹರಿದು ಕೊಲ್ಲಿಯಲ್ಲಿ ಪಶ್ಚಿಮದ ಸಮುದ್ರವನ್ನು ಸೇರುತ್ತಿತ್ತು. ನದಿ ಪೂರ್ವ ಮತ್ತು ಪಶ್ಚಿಮ ಎಂದು ಎರಡು ಕವಲು ಹೊಂದಿತ್ತು. ಹಿಮಾಲಯದಲ್ಲಿ ಹುಟ್ಟುತ್ತಿದ್ದ ಸಟ್ಲೇಜ್ ನದಿ ಪ್ರಸ್ತುತ ಘಗ್ಗರ್ ಪಟಿಯಾಲಿವಾಲಿ ಕಾಲುವೆ ಮಾರ್ಗದಲ್ಲಿ ಹರಿಯುತ್ತಿತ್ತು. ಇದು ಪುರಾತನ ಕಾಲದ ಸರಸ್ವತಿ ನದಿಯ ಪಶ್ಚಿಮ ಕವಲಾಗಿತ್ತು. ಸರಸ್ವತಿ ನದಿಯ ಪೂರ್ವ ಕವಲು ಮಾರ್ಕಂಡ ಹಾಗೂ ಸರ್ಸುತಿ (ಸರಸ್ವತಿಯ ಅಪಭ್ರಂಶ) ನದಿಯಾಗಿತ್ತು ಎಂದು ಏಳು ಸದಸ್ಯರನ್ನು ಹೊಂದಿರುವ ಸಮಿತಿ ತಿಳಿಸಿದೆ. ಸರಸ್ವತಿ ನದಿ ಅಸ್ತಿತ್ವ ಕುರಿತು ಹಿರಿಯ ಭೂಗೋಳಶಾಸ್ತ್ರಜ್ಞ ಪ್ರೊ. ಕೆ.ಎಸ್. ವಾಲ್ದಿಯಾ ಅವರ ನೇತೃತ್ವದ ಸಮಿತಿ ಆರು ತಿಂಗಳ ಕಾಲ ಸಂಶೋಧನೆ ನಡೆಸಿ ಸರ್ಕಾರಕ್ಕೆ ವರದಿ ಸಲ್ಲಿಸಿದೆ.

1700 ಪಟ್ಟಣಗಳಿಗೆ ನೀರು ಒದಗಿಸಿದ್ದ ನದಿ : ಹರಪ್ಪ ನಾಗರಿಕತೆ ಇದ್ದ ಕಾಲದಲ್ಲಿ ಈ ವಿಶಿಷ್ಟ ಮಾರ್ಗದ ಸುತ್ತಮುತ್ತ ಅಂದಾಜು 1700 ದೊಡ್ಡ ಸಣ್ಣ ಹಾಗೂ ದೊಡ್ಡ ಗ್ರಾಮ, ಪಟ್ಟಣಗಳಿದ್ದವು. 100ಕ್ಕೂ ಹೆಚ್ಚು ಹೆಕ್ಟೇರ್ ವಿಸ್ತೀರ್ಣ ಹೊಂದಿದ್ದ ಕೆಲವು ಪಟ್ಟಣಗಳು ಸುಮಾರು 5500 ವರ್ಷಗಳ ಕಾಲ ಅಸ್ತಿತ್ವದಲ್ಲಿದ್ದವು. ಈ ಪಟ್ಟಣಗಳಿಗೆ ಸರಸ್ವತಿ ನದಿ ನೀರು ಒದಗಿಸುತ್ತಿತ್ತು ಎಂದು ಸಮಿತಿ ತಿಳಿಸಿದೆ.

**ಓದುಗರೇ ಗಮನಿಸಿ**

**ಪುಂಗವದ ಹೊಸ ಚಂದಾದಾರರಾಗಲು ಮತ್ತು ಚಂದಾ ನವೀಕರಣ ಮಾಡುವವರು ಕೆಳಗಿನ ವಿಳಾಸಕ್ಕೆ ಸಂಪರ್ಕಿಸಿ: ಪುಂಗವ, #74, ರಂಗರಾವ್ ರಸ್ತೆ, ಶಂಕರಪುರಂ, ಬೆಂಗಳೂರು-04. ಮೊಬೈಲ್: 97391 83021**

ಸಂಪಾದಕ-ಪ್ರಕಾಶಕ : ಕಾ.ಶ್ರೀ. ನಾಗರಾಜ, # 74, ರಂಗರಾವ್ ರಸ್ತೆ, ಬೆಂಗಳೂರು-04. ಮೊ: 97312 64009 ಮುದ್ರಕರು : ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು-19.